‘ಒಬ್ಬೊಬ್ಬರೇ ಇದ್ರೆ ಎಲ್ಲಿ ನೋಡ್ಕೊಳೋಕಾಗತ್ತೆ ನಾಯಿನ, ಅದಕ್ಕೆ ಟೈಂ ಹೇಗೆ ಕೊಡೋದು...’

‘...’

‘ನಂಗನಿಸ್ತಿದೆ...’

‘ಏನು?’

‘ಹೊರಗಡೆ ಮಾತಾಡೋಣ. ಅವಳ ಮುಂದೆ ಬೇಡ’

ಯಾವ ಕೋರ್ಟು, ಕಚೇರಿ ಮಾತುಕತೆ ಮೀಡಿಯೇಷನ್‌ಗೂ ಇರದ ಮಹತ್ವ ಈ ಮಾತುಕತೆಗಿತ್ತು. ಇಬ್ಬರೂ ಕಾಫಿ ಹಿಡಿದು ಗಾಢವಾಗಿ ಯೋಚಿಸುತ್ತಾ ಕೂತಿದ್ದರು.

‘ನಂಗನಿಸತ್ತೆ ನಾವು ಸ್ನೂಪಿನ ಕೊಡಬೇಕು ಅಂತ...’

‘ಹ್ಞೂ...’ ಅದು ನಿಜ ಎನ್ನುವುದು ಪ್ರಿಯಾಗೂ ಗೊತ್ತಿತ್ತು...

ಆದರೂ, ಅದಕ್ಕೆ ಬೇಜಾರಾಗಲ್ವಾ...? ಪ್ರಿಯಾ ಅನುಮಾನಿಸಿದಳು.

‘ಆಗತ್ತೆ. ಏನು ಮಾಡೋಕಾಗತ್ತೆ ಹೇಳು, ನಾವು ಅದನ್ನ ಸರಿಯಾಗಿ ನೋಡ್ಕೊಳೋಕಾಗಲ್ಲ ಅಂದಮೇಲೆ ಅದು ನಮ್ಮ ಜೊತೆನೇ ಇರಬೇಕು ಅಂದ್ಕೊಳೋದು ಸ್ವಾರ್ಥ ಅಲ್ವಾ...?’ ಪ್ರಶಾಂತನ ಮಾತಲ್ಲಿ ಗಿಲ್ಟ್ ಇತ್ತಾ ಇಲ್ಲವಾ ಎನ್ನುವುದನ್ನ ಪ್ರಿಯಾ ಗಮನಿಸಲಿಲ್ಲ.

‘ಬಿಡು, ಒಂದೆರಡು ತಿಂಗಳು ಬೇಜಾರಿರಬಹುದು, ನಮಗಿಂತ ಚೆನ್ನಾಗಿ ನೋಡ್ಕೊಳೋರು ಬಂದಾಗ ಅದು ನಮ್ಮನ್ನ ಮರಿಬಹುದು, ಎಲ್ಲೋ ಖುಷಿಯಾಗಿರಲಿ ಬಿಡು...’ ಪ್ರಿಯಾಳ ಮಾತು ತನಗಾಗಿಯೇ ಇದ್ದದ್ದಾ ಎನ್ನುವುದನ್ನು ಪ್ರಶಾಂತ ಕೂಡ ಗಮನಿಸಲಿಲ್ಲ.

‘ಸರಿ, ನನ್ನ ಫ್ರೆಂಡ್ ಒಬ್ಬ ಅವತ್ತೇ ಕೇಳಿದ್ದ ನಾಯಿ ಕೊಡ್ತೀರಾ ಅಂತ. ಅವನ ಹತ್ತಿರ ಮಾತಾಡ್ತೀನಿ, ನಾಳೆನೋ ನಾಡಿದ್ದೋ ಸ್ನೂಪಿನ ಕರ್ಕೊಂಡು ಹೋಗೋಕೆ ಹೇಳ್ತೀನಿ. ಅವರ ಮನೇಲಿ ಚೆನ್ನಾಗಿ ನೋಡ್ಕೊತಾರೆ.’

ಪ್ರಿಯಾ ಕಣ್ಣು ತುಂಬಿಕೊಂಡಳು.

‘ಒಂದು ಕೆಲಸ ಮಾಡೋಣ, ಸ್ನೂಪಿನ ನಾನೇ ಕರ್ಕೊಂಡು ಹೋಗ್ತೀನಿ, ಒಂದೆರಡು ದಿನದಲ್ಲಿ ಕೊಟ್ಟುಬಿಡ್ತೀನಿ. ನಿಂಗೆ ಅದೊಂದು ಕಷ್ಟ ಕಡಿಮೆ ಆಗತ್ತೆ’ ಪ್ರಶಾಂತ ದೊಡ್ಡ ಉಪಕಾರವನ್ನೇ ಮಾಡುತ್ತಿದ್ದ ಈಗ.

‘ಹ್ಞೂ...’

* * *

ಪ್ರಿಯಾ ಆಫೀಸಿಂದ ಬರುವ ಹೊತ್ತಿಗೆ ಮನೆ ಖಾಲಿಯಾಗಿತ್ತು. ಹಿಂದಿನ ದಿನದಿಂದಲೂ ಸ್ನೂಪಿಯ ಕಣ್ಣಲ್ಲಿ ಕಣ್ಣಿಟ್ಟು ನೋಡಿರಲಿಲ್ಲ ಅವಳು. ಮೆಂಟಲಿ ಪ್ರಿಪೇರ್ ಆಗಿದ್ದಳು, ಸ್ನೂಪಿ ಮನೇಲಿ ಇರೋದಿಲ್ಲ, ನೆನಪಿಸಿಕೊಳ್ಳಬಾರದು. ಅದು ಜೊತೆಗೆ ಇರೋ ಬದಲು ಬೇರೆ ಕಡೆ ಇರೋದೇ ಅದಕ್ಕೆ ಒಳ್ಳೆಯದು, ಅವಳ ಸಂಕಟಕ್ಕೆ ಅವಳದೇ ಲಾಜಿಕ್‌ಗಳನ್ನ ಕೊಟ್ಟು ಸಮಾಧಾನಿಸಿಕೊಂಡಳು.

‘ಮನೆ ಶಿಫ್ಟ್ ಮಾಡಿದೀನಿ ಸಂಜೆ’ ಪ್ರಶಾಂತ ಮೆಸೇಜಿಸಿದ್ದ.

‘ಸ್ನೂಪಿ?’

‘ನಂಜೊತೆನೇ ಇದಾಳೆ, ನಾಳೆ ನಾಡಿದ್ದು ಯಾರೋ ಬಂದು ಕರ್ಕೊಂಡು ಹೋಗ್ತಾರೆ’

‘ಓಕೆ. ಟೇಕ್ ಕೇರ್’

‘ಕೋರ್ಟ್ ಆರ್ಡರ್ ಬರತ್ತೆ ನಾಡಿದ್ದು, ಕಲೆಕ್ಟ್ ಮಾಡ್ಕೊ’

‘ಸರಿ’

ಇಂದಿಗೆ ಹೇಗೋ ಎಲ್ಲ ಮುಗೀತು ಎಂದು ನಿಟ್ಟುಸಿರಿಟ್ಟು ಕಾಫಿ ಹಿಡಿದು ಕೂತಳು.

ಮನೆ ಅಸ್ತವ್ಯಸ್ತವಾಗಿತ್ತು. ಪ್ರಶಾಂತನ ಮನೆ ಶಿಫ್ಟಿಂಗ್ ನಿಂದಾಗಿ ಮನೆ ಸಾಮಾನುಗಳೆಲ್ಲ ಅಸ್ತವ್ಯಸ್ತಗೊಂಡಿದ್ದವು.

